# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/253/13-14

ದಿನಾಂಕ : 26-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಕೆ. ನಾರಾಯಣ ಸ್ವಾಮಿ ತಂದೆ ದಿ. ಕೆ. ಈರಪ್ಪ, ಕಾರ್ಕಲ್‌ತೋಟ ಬಡಾವಣೆ, ಬಳ್ಳಾರಿ<br>**(ಶ್ರೀ ಎನ್. ಸಿದ್ದಪ್ಪ, ವಕೀಲರು, ಬಳ್ಳಾರಿ)** | (1) ತಹಶೀಲ್ದಾರರು, ಭೂ ದಾಖಲೆಗಳ ಶಾಖೆ, ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಮುಂಡರಗಿ | 167 | 7.75 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಸರ್ವೆ ದಾಖಲೆಯಂತೆ ಕಂದಾಯ ದಾಖಲೆಗಳಲ್ಲಿ ತಿದ್ದುಪಡಿ ಮಾಡಲು ಕೋರಿ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 11-07-2014, 13-03-2015, 12-06-2016, 06-11-2015, ಮತ್ತು 26-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 26-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಮುಂಡರಗಿ ಗ್ರಾಮದ ಸ.ನಂ 167 ವಿಸ್ತೀರ್ಣ: 7.75 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸರ್ವೆ ದಾಖಲೆಯಂತೆ ಕಂದಾಯ ದಾಖಲೆಗಳಲ್ಲಿ ತಿದ್ದುಪಡಿ ಮಾಡಲು ಕೋರಿರುತ್ತಾರೆ.

ಮುಂದುವರೆದು ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ ಮುಂಡರಗಿ ಗ್ರಾಮದ ಸ.ನಂ 167 ವಿಸ್ತೀರ್ಣ: 7.75 ಎಕರೆ ಜಮೀನಿಗೆ ಸಂಬಂಧಿಸಿದ ವಿವಾದಾಸ್ಪದ ಪ್ರಕರಣವು, ಇಂಡಿಕರಣಕ್ಕೆ ಸಂಬಂಧಿಸಿದ್ದಾಗಿದ್ದು,ಕಾರಣ ಭೂ-ದಾಖಲೆಗಳ ಸಹಾಯಕ ನಿರ್ದೇಶಕರು ಬಳ್ಳಾರಿ ಇವರಿಗೆ ಸದರಿ ಜಮೀನಿನ ವಿವಾದಕ್ಕೆ ಸಂಬಂಧಿಸಿದಂತೆ ವಿಚಾರಣೆ ಕೈಗೊಂಡು ಸೂಕ್ತ ದುರಸ್ಥಿ ಕಾರ್ಯಾಕ್ಕೆ ಆದೇಶ ಮಾಡುವಂತೆ ತಿಳಿಸಿರುವ ಈ ಕೆಳಕಂಡ ಆದೇಶ

**:: ಆದೇಶ ::**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಮುಂಡರಗಿ ಗ್ರಾಮದ ಸ.ನಂ 167 ವಿಸ್ತೀರ್ಣ: 7.75 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸದರಿ ವಿವಾದವಿ ಇಂಡಿಕರಣದ ವ್ಯಾಪ್ತಿಗೆ ಒಳಪಟ್ಟಿದ್ದು ಕಾರಣ ದುರಸ್ಥಿ ಕಾರ್ಯಾಕ್ಕೆ ಆದೇಶ ಮಾಡುವ ಕುರಿತಾಗಿ, **ಈ ಪ್ರಕರಣದ ಮೂಲಕಡತವನ್ನು** ಈ ಆದೇಶಕ್ಕೆ ಲಗತ್ತಿಸಿ ಸಲ್ಲಿಸುತ್ತಾ, ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಬಳ್ಳಾರಿ ಇವರಿಗೆ ಸಲ್ಲಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ **ದಿನಾಂಕ: 26-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

Received
1/11/16

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು
ಬಳ್ಳಾರಿ.

ಪ್ರತಿಯನ್ನು :

1) ಭೂ ದಾಖಲೆಗಳ ಸಹಾಯಕ ನಿರ್ದೇಶಕರು , ಬಳ್ಳಾರಿ ಇವರಿಗೆ ಮುಂದಿನ ಕ್ರಮಕ್ಕಾಗಿ
2) ವಾದಿಗಳಿಗೆ